ನಿರ್ದೇಶನ ಮಾಡುತ್ತೇನೆ. ಟೀವಿ ಸೀರಿಯಲ್‌ಗಳಲ್ಲಿ 'ಮುಕ್ತ ಮುಕ್ತ', 'ಅರ್ಧ ಸತ್ಯ', 'ಗೋಧೂಳಿ', 'ಬೆಳದಿಂಗಳಾಗಿ ಬಾ...' ಮುಂತಾದವುಗಳಿಗೆ ಹಿನ್ನೆಲೆ ಗಾಯನ ನನ್ನದೇ. ಇವೆಲ್ಲವೂ ಬಹಳ ಜನಪ್ರಿಯವೂ ಆದವು.

◆ ಸಾರಂಗಿ ವಾದನಕ್ಕೆ ವಿದೇಶಗಳಲ್ಲಿ ದೊರೆತ ಪ್ರತಿಕ್ರಿಯೆ ಯಾವ ಬಗೆಯದು?

ಹಲವಾರು ದೇಶಗಳಲ್ಲಿ ಸಾರಂಗಿ ಕಛೇರಿ ನಡೆಸಿಕೊಟ್ಟಿದ್ದೇನೆ. ಫ್ರಾನ್ಸ್, ಜರ್ಮನಿ, ಬೆಲ್ಜಿಯಂ, ನೆದರ್‌ಲೆಂಡ್, ಹಾಲೆಂಡ್, ಅಮೆರಿಕ, ಯೂರೋಪು ದೇಶಗಳಲ್ಲಿ, ಸಿಂಗಪುರ, ಮಲೇಶಿಯಾ, ದುಬೈ, ಕತಾರ್, ಮಸ್ಕತ್... ಹೀಗೆ ಎಲ್ಲೆಡೆ ಸಾರಂಗಿ ನುಡಿಸಿದ್ದೇನೆ. ಅಲ್ಲೆಲ್ಲ ಗಾಯನಕ್ಕಿಂತಲೂ ಜನ ಸಾರಂಗಿಯನ್ನೇ ಹೆಚ್ಚು ಆಸ್ವಾದಿಸುತ್ತಾರೆ ಅನಿಸಿತು. ವಿದೇಶೀಯರಿಗೆ ವಾದ್ಯ ಸಂಗೀತವೇ ಹೆಚ್ಚು ಪ್ರೀತಿ. ಸಂಗೀತ ವಾದ್ಯವನ್ನು ಅವರು ಬಹಳ ಇಷ್ಟಪಡ್ತಾರೆ.

◆ ಸಂಗೀತದಲ್ಲಿ ಆಸಕ್ತಿಯುಳ್ಳ ಮಕ್ಕಳ ಸಂಖ್ಯೆ ಈಗ ಹೆಚ್ಚಾಗಿದ್ದರೂ, ಸಾರಂಗಿ ಕಲಿಯಲು ಏಕೆ ಮುಂದೆ ಬರುತ್ತಿಲ್ಲ?

ಈಗಿನ ಮಕ್ಕಳಿಗೆ ಎಲ್ಲವೂ ಇನ್‌ಸ್ಟಂಟ್ ಆಗಬೇಕು. ಕಛೇರಿ ಕೊಡುವಷ್ಟರ ಮಟ್ಟಿಗೆ ನುಡಿಸಾಣಿಕೆ ಬರಬೇಕಾದರೆ ಕನಿಷ್ಠ 15 ವರ್ಷವಾದರೂ ಕಲಿಯಬೇಕು. ಎರಡು ಮೂರು ತಿಂಗಳಿನಲ್ಲಿ ನುಡಿಸಲು ಬರಬೇಕು ಎಂದರೆ ಅದು ಅಸಾಧ್ಯ. ಸಾರಂಗಿ ವಾದನದ ಕಲಿಕೆ ತುಂಬ ಕಷ್ಟ. ವಯೊಲಿನ್, ಸಾರಂಗಿ, ಸರೋದ್ ನುಡಿಸಾಣಿಕೆ ಕಲಿಯಲು ಹೆಚ್ಚಿನ ಪರಿಶ್ರಮ, ಪ್ರಯತ್ನ, ಸಾಧನೆ ಬೇಕು. ಆದರೆ ಇಂದಿನ ಮಕ್ಕಳು ಸುಲಭವಾಗಿ ಕಲಿಯುವಂತಹ ಕೀಬೋರ್ಡ್, ಗಿಟಾರ್ ಮುಂತಾದ ವಾದ್ಯಗಳ ಕಡೆಗೆ ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ. ಹೆಚ್ಚಿನ ಶ್ರಮ ಬಯಸುವ ವಾದ್ಯ ತೆರೆಮರೆಗೆ ಸರಿಯಲು ಇದೂ ಒಂದು ಕಾರಣ. ನಮ್ಮ ಮಕ್ಕಳು ಸಾರಂಗಿ ಕಡೆಗೆ ಹೆಚ್ಚಿನ ಒಲವು ತೋರಿಸಬೇಕಾಗಿದೆ.

◆ ಈ ಹೊತ್ತಿನ ಬಹು ದೊಡ್ಡ ಆತಂಕವಾದ ಜಾತೀಯತೆಗೆ ಸಂಗೀತದಲ್ಲಿ ಉತ್ತರವಿದೆ ಅಲ್ಲವೇ?

ಸಂಗೀತ ಎನ್ನುವುದು ದೈವಿಕಲೆ. ಹರಿದಾಸರು, ಸೂಫಿಗಳು, ಶರಣರು, ಅನುಭಾವಿಗಳು, ಆರೂಢರು... ಹೀಗೆ ಎಲ್ಲ ಧರ್ಮ–ಮತಗಳ, ಪಂಥದ ಸಹೃದಯರು ಸಂಗೀತಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಇವರೆಲ್ಲ ಜಾತಿ, ಧರ್ಮವನ್ನು ಮೀರಿ ಬೆಳೆದವರು. ಮುಸ್ಲಿಂ ಸಂಗೀತ ಎನ್ನುವುದು ಇರುವುದಾಗಿದ್ದರೆ ಈಗ ಹಿಂದೂಸ್ತಾನಿ ಸಂಗೀತಕ್ಕೆ ಮುಸ್ಲಿಂ ಕಲಾವಿದರ ಕೊಡುಗೆಯೇ ದೊಡ್ಡದಿದೆ. ಸಂಗೀತಕ್ಕೆ ಜಾತಿಯೇ ಇಲ್ಲ.

'ಬೇಜು ಬಾವ್ರ' ಚಲನಚಿತ್ರದ 'ಮನ್ ತಡಪತ್ ಹರಿ ದರುಶನ್‌ಕೊ ಆಜ್' ಜನಪ್ರಿಯ ಭಕ್ತಿಗೀತೆಯಾಗಿ ಎಲ್ಲ ದೇವಾಲಯಗಳಲ್ಲಿ ಮೊಳಗುತ್ತಿರುತ್ತದೆ. ಈ ಹಾಡನ್ನು ಹಾಡಿದವರು ಮಹಮದ್ ರಫಿ, ಬರೆದವರು ಮಹಮದ್ ಶಕೀಲ್ ಬದಾನಿ, ಸಂಗೀತಗಾರರು ನೌಷದ್ ಅಲಿ. ಇದು ಸಂಗೀತದ ಜಾತ್ಯತೀತ ಸ್ವರೂಪಕ್ಕೆ ಉದಾಹರಣೆ. ಹಿಂದೂಸ್ತಾನಿ ಸಂಗೀತದ ಇತಿಹಾಸವನ್ನು ಅವಲೋಕಿಸಿದರೆ ಘಟಾನುಘಟಿ ಸಂಗೀತಗಾರರಾಗಿದ್ದ ಪಾಟಿಯಾಲ ಘರಾಣದ ಉಸ್ತಾದ್ ಬಡೆಗುಲಾಂ ಅಲಿ ಖಾನ್, ಕಿರಾಣಾ ಘರಾಣದ ಉಸ್ತಾದ್ ಕರೀಂ ಖಾನ್, ಸಿತಾರ್ ವಾದಕರಾಗಿದ್ದ ಉಸ್ತಾದ್ ವಿಲಾಯತ್ ಖಾನ್, ಶಹನಾಯ್ ವಾದಕ ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರಿಂದ ಇಂದಿನ ಮೇರು ಗಾಯಕಿ ಬೇಗಂ ಪರ್ವೀನ್ ಸುಲ್ತಾನ, ತಬಲಾ ಮಾಂತ್ರಿಕ ಉಸ್ತಾದ್ ಜಾಕೀರ್ ಹುಸೇನ್... ಹೀಗೆ ಮುಸ್ಲಿಂ ಪರಂಪರೆಯಿಂದ ಬಂದ ಗಾಯಕ–ವಾದಕರ ಪಟ್ಟಿ ದೊಡ್ಡದಿದೆ. ಹಾಗೆ